# ಅಧ್ಯಾಯ ೨೩ ಔಷಧ ಪೆಟ್ಟಿಗೆ



ಪ್ರತಿಯಿಂದು ಹಳ್ಳಿಯಲ್ಲಿಯೂ, ಪ್ರತಿ ಮನೆಯಲ್ಲಿಯೂ ತುರ್ತುಪರಿಸ್ಥಿತಿಗೆ ಬೇಕಾಗುವ ಕೆಲವೊಂದು ಔಷಧಗಳ ಪೆಟ್ಟಿಗೆಯೊಂದು ಇರಲೇಬೇಕು.

ಕುಟುಂಬದಲ್ಲೊಂದು ಮನೆಯ ಔಷಧ ಪೆಟ್ಟಿಗೆ (೩೮೦ ನೆ ಪುಟ ನೋಡಿ) ಇರಬೇಕು. ಇದರಲ್ಲಿ ಪ್ರಥಮ ಚಿಕಿತ್ಸೆಯ ಔಷಧಗಳು, ಸಾಧಾರಣ ಸೋಂಕು ರೋಗದ ಮತ್ತು ಅತಿ ಸಾಮಾನ್ಯ ಕಾಯಿಲೆಗಳ ಔಷಧಗಳು ಇರಬೇಕು.

ಹಳ್ಳಿಯಲ್ಲಿ ಇನ್ನೂ ಒಂದು ಹೆಚ್ಚಿನ ಔಷಧ ಪೆಟ್ಟಿಗೆ, ಹಳ್ಳಿಯ ಔಷಧದ ಪೆಟ್ಟಿಗೆ ಇರಬ್ಬೇಕು. (೩೮೨ ನೆ ಪುಟ) ಇದರಲ್ಲಿ
ದಿನನಿತ್ಯದ ಆರೋಗ್ಯ ಸಮಸ್ಯೆಗಳ ಔಷಧದೊಂದಿಗೆ ಹೆಚ್ಚು ತೀವ್ರ ರೋಗಗಳಿಗೆ ಮತ್ತು ತುರ್ತು ಪರಿಸ್ಥಿತಿಗೆ ಬೇಕಾಗುವ ಔಷಧಗಳೂ ಇರಬೇಕು. ಇಡೀ ಹಳ್ಳಿಯ ಜನರೆಲ್ಲ ವಿಶ್ವಾಸ ಇಡುವ ಆರೋಗ್ಯ ಕಾರ್ಯಕರ್ತ, ಶಿಕ್ಷಕ, ಹಳ್ಳಿಯಮುಖ್ಯಸ್ಥ. ಅಂಗಡಿಯವರು ಇವರಲ್ಲಿಯಾರಾದ್ರೂ ಒಬ್ಬರು ಈ ಪೆಟ್ಟಿಗೆಯ ಜವಾಬ್ದಾರಿ ಹೊರಬೇಕು. ಸಾಧ್ಯವಿದ್ದರೆ ಈ ಔಷಧ ಪೆಟ್ಟಿಗೆಯಲ್ಲಿ ಊರಿನವರೆ ಹಣ ಎತ್ತಿ ಖರೀದಿಸಿ ತಂದ ಔಷಢಃಗಳಿರಬೇಕು. ಜಾಸ್ತಿ ಹಣ ಕೊಡಲು ಸಾಧ್ಯವಿರುವವರು ಜಾಸ್ತಿ ಕೊಡಬಹುದು. ಆದರೆ ಹಣವನ್ನು ಹೆಚ್ಚು ಕೊಟ್ಟವರಿರಲಿ,, ಕಡಿಮೆ ಕೊಟ್ಟವರಿರಲಿ ಈ ಔಷಢ ಪೆಟ್ಟಿಗೆ ಎಲ್ಲರ ಒಳಿತಿಗಾಅಗಿ ಎಂಬುದನ್ನು ಎಲ್ಲರೂ ಅರಿತಿರಬೇಕು.

ಹಳ್ಳಿಯಲ್ಲಿಯ ಸ್ವಸಹಾಯ ಮಹಿಳಾ ಸಂಘಗಳು, ಯುವಕ ಸಂಘಗಳು ಕೂಡ ಇಂಥ ಒಂದು ಹಳ್ಳಿ ಔಷಧ ಪೆಟ್ಟಿಗೆಯನ್ನು ತಮ್ಮಲ್ಲಿ ಇಟ್ಟುಕೊಂಡಿರಬಹುದು. ಆರೋಗ್ಯದ ಬಗ್ಗೆ, ಔಷಧಗಳ ಉಪಯೋಗದ ಬಗ್ಗೆ ಸ್ವಲ್ಪ ಮಾಹಿತಿ ಇರುವವರು ಔಷಧ ಪೆಟ್ಟಿಗೆಯ ಜವಾಬ್ದಾರಿಯನ್ನು ಹೊರಬೇಕು.

ಈ ಮುಂದಿನ ಪುಟಗಳಲ್ಲಿ ಔಷಧ ಪೆಟ್ಟಿಗೆಯಲ್ಲಿ ಏನೇನು ಇರಬೇಕು ಎಂಬುದನ್ನು ಕೊಟ್ಟಿದೆ. ನಿಮ್ಮ ನಿಮ್ಮಲ್ಲಿಯ ಅವಶ್ಯಕತೆ ಮತ್ತು ಸಿಗುವ ಸಂಪನ್ಮೂಲವನ್ನು, ಸಿಗುವ ಸೌಲಭ್ಯಗಳನ್ನೂ ಆಧರಿಸಿ ಈ ಪೆಟ್ಟಿಗೆಗೆ ಬೇಕಾದುದನ್ನು ಸೇರಿಸಬಹುದು ಅಥವಾಅ ಬಿಡಬಹುದು. ಇದರಲ್ಲಿ ಎಲ್ಲವೂ ಆಧುನಿಕ ಔಷಧಗಳನ್ನೇ ಕೊಟ್ಟಿದ್ದರೂ ಚೆನ್ನಾಗಿ ಕೆಲಸ ಮಾಡಬಲ್ಲ, ನಿಮಗೆ ಬಳಕೆ ಸರಿಯಾಗಿ ಗೊತ್ತಿರುವಂಥ ಮನೆಮದ್ದುಗಳನ್ನೂ ಇದರೊಳಗೆ ಹಾಕಿಡಬಹುದು.

ಒಂದೊಂದು ಔಷಧವೂ ಎಷ್ಟೆಷ್ಟಿರಬೇಕು? ಔಷಧ ಪೆಟ್ಟಿಗೆಯಲ್ಲಿ ಅವಶ್ಯಕ ಔಷಧವೆಲ್ಲಾ ಅತಿ ಕಡಿಮೆ ಪ್ರಮಾಣದಲ್ಲಿ ಇದ್ದರೆ ಸಾಕು. ಕೆಲವು ಬಾರಿ ರೋಗಿಯನ್ನು ಆಸ್ಪತ್ರೆಗೆ ಕಳಿಸಬೇಕಾಗಬಹುದು. ಔಷಧ ಪೆಟ್ಟಿಗೆಯಲ್ಲಿ ಚಿಕಿತ್ಸೆಯನ್ನು ಆರಂಭಗೊಳಿಸಲಿಕ್ಕಷ್ಟೇ ಔಶಃಢಃಗಳಿದ್ದರೆ ಸಾಕು.

ಆ ಔಷಢಃ ಪೆಟ್ಟಿಗೆ ಎಷ್ಟು ಜನಕ್ಕೆ ಸಂಬಂಧಿಸಿದ್ದು, ಯಾವ ಯಾವ ಕಾಯಿಲೆಗಳು ಹೆಚ್ಚು ಕಾಣುತ್ತವೆ, ಔಷಧವೊಂದು ಖರ್ಚಾದರೆ ಎಷ್ಟು ದೂರ ಹೋಗಿ ಮತ್ತೆ ತರಬೇಕು, ಎಂಬುದನ್ನೆಲ್ಲ ನೋಡಿಕೊಂಡು ಅದಕ್ಕನುಗುಣವಾಗಿ ಔಷಧ ಖರೀದಿಸಿಟ್ಟಿರ್ೇಕು. ಇಷ್ಟೇ ಅಲ್ಲದೇ ಆಯಾ ಕುಟುಂಬದವರು ಅಥವಾ ಹಳ್ಳಿಯವರು ಔಷಧಕ್ಕಾಗಿ ಇಟ್ಟ ಹಣ ಎಷ್ಟು ಎಂಬುದರ ಮೇಲೂ ಅದು ಅವಲಂಬಿಸಿರುತ್ತದೆ. ಕೆಲವು ಔಷಧಗಳು ಬಹಳ ದುಬಾರಿಯಾಗಿದ್ದರೂ ಅವುಗಳ ಅವಶ್ಯಕತೆ ತುರ್ತುಪರಿಸ್ಥಿತಿಗಳಲ್ಲಿ ಮಾತ್ರ ಬಹಳ ಹೆಚ್ಚಿರುವುದರಿಂದ ಅಂಥವನ್ನು ಇಟ್ಟಿರಲೇಬೇಕಾಗುತ್ತದೆ.

<u>**ಸೂಚನೆ:**</u> **ಪ್ರಸೂತಿ ಪೆಟ್ಟಿಗೆ:** ಸೂಲಗಿತ್ತಿ ಮತ್ತು ಗರ್ಭಿಣಿಯರು ತಯಾರಿಸಿಟ್ಟಿರಬೇಕಾದ ಪ್ರಸೂತಿ ಪೆಟ್ಟಿಗೆ ಬೇರೆಯದಿರುತ್ತದೆ. ಅದರಲ್ಲಿರಬೇಕಾದ ಸಾಮಗ್ರಿಗಳನ್ನು ೩೦೦ ಮತ್ತು ೩೦೧ ನೇ ಪುಟಗಳಲ್ಲಿ ಕೊಡಲಾಗಿದೆ.

## ನಿಮ್ಮ ಔಷಧ ಪೆಟ್ಟಿಗೆಯನ್ನು ಸರಿಯಾಗಿ ಇಟ್ಟುಕೊಳ್ಳುವುದು


ಎಚ್ಚರಿಕೆ: ಯಾವುದೆ ಔಧ ಪೆಟ್ಟಿಗೆ ಮಕ್ಕಳ ಕೈಗೆ ಎಟುಕದಿರಲಿ. ಲೆಚ್ಚಿನ ಪ್ರಮಾಣದಲ್ಲಿ ತೆಗೆದುಕೊಂಡ ಯಾವುದೆ ಔಷಧ ವಿಷಕಾರಿ ಆಗಬಹುದು.

ಎಲ್ಲಾ ಔಷಧಗಳಿಗೂ ಗುರುತು ಪಟ್ಟಿ ಹಚ್ಚಿದ್ದು ಪ್ರತಿಯೊಂದರ ಮೇಲೂ ಅದನ್ನು ಉಪಯೋಗಿಸುವುದು ಹೇಗೆ ಎಂಬ ಸೂಚನೆಗಳನ್ನು ಬರೆದಿರಬೇಕು. ಇದನ್ನು ಬರೆದಿಟ್ಟ ಪುಸ್ತಕ ಔಷಧ ಪೆಟ್ಟಿಗೆಯಲ್ಲೆ ಇರಬೇಕು.

ಎಲ್ಲಾ ಔಶಃಧಃಗಳೂ ಒಂದು ಸ್ವಚ್ಛವಾದ, ಒಣಗಿದ, ತಂಪು ಜಾಗದಲ್ಲಿರಲಿ. ಜಿರಲೆಗಳಾಗಲೀ, ಇಲಿಗಳಾಗಲೀ ತಿಂದುಹಾಕದ ರೀತಿಯಲ್ಲಿರಲಿ. ಜಾಳರಿವೆ, ಹಟ್ಟಿ ಅಥವಾ ಇನ್ನಿತಾ ಸಾಮಗ್ರಿಗಳನ್ನು ಬೇರೆ ಬೇರೆ ಯಾಗಿ ಪ್ಲಾಸ್ಟಿಕ್ ಚೀಲಗಳಲ್ಲಿಟ್ಟು ಸರಿಯಾಗಿ ಮುಚ್ಚಿಡಿ.

ಅತಿ ಅವಶ್ಯ ಬೀಳುವ ಪರಿಸ್ಥಿತಿಗಳಲ್ಲಿ ಬೇಕಾದ ಔಆಃಸಧಗಳನ್ನು ಸದಾ ಕೈಗೆ ಸಿಗುವಂತೆಯೇ ಇಟ್ಟುಕೊಳ್ಳಿ. ಒಂದು ಖರ್ಚಾಗುತ್ತಲೇ ಇನ್ನೊಂದನ್ನು ಖರೀದಿಸಿಡಿ.

LÂ¯jµ° K'¬ I¤ÈÞŠ® ತಾರೀಖು ಮುಗಿದು ಹೋಗಿದೆಯೇ ಇಲ್ಲವೇ ಎಂಬ ಕಡೆ ಲಕ್ಷ್ಯವಿರಲಿ. ಖಾರೀಖು ಮುಗಿದ ಔಷಧ ಹಾಳಾದಂತೆ ಕಾಣುವ ಔಧಳನ್ನೆಲ್ಲ ಆದಷ್ಟು ಬೇಗ ನಾಶಮಾಡಿ. ಟೆಟ್ರಾಸೈಕ್ಲಿನ್ ನಂಥ ಕೆಲವು ಔಶಃಧಗಳ ದಿನ ಮುಗಿದುಹೋಯಿತೆಂದರೆ ಅವುಅಪಾಯಕಾರಿ ಆಗಬಹುದು.



ಔಷಧಗಳು ಮಕ್ಕಳ ಕೈಗೆ ಎಟುಕದಂತೆ ಇಟ್ಟಿರಿ.



## ಔಷಧ ಪೆಟ್ಟಿಗೆಯ ಸಾಮಾನುಗಳ ಖರೀದಿ

ಈ ಪುಸ್ತಕದಲ್ಲಿ ವಿವರಿಸಿರುವ ಹೆಚ್ಚಿನಾಉಷಧಗಳನ್ನು ಪೇಟೆಯಿಂದ ತರಿಸಿಕೊಳ್ಳಬಹುದು. ನಾಲ್ಕಾರು ಕುಟುಮದವರು ಒಟ್ಟಾಗಿ ತಮಗೆ ಬೇಕಾಗುವ ಔಷಧಗಳನ್ನೆಲ್ಲ ಒಟ್ಟಿಗೇ ಖರೀದಿಸಿದರೆಂಡಃರೆ ಔಶಧ ಅಂಗಡಿಗಳವರೂ ಕಡಿಮೆ ಬೆಲೆಗೆ ಕೊಡಬಹುದು. ಅಥವಾ ಸಗಟು ವ್ಯಾಪಾರಿಯಿಂದಲೆ ಖರೀದಿಸಿದರಂತೂ ಇನ್ನೂ ಕಡಿಮೆ ಬೆಲೆಗೆ ಸಿಗಬಹುದು.

ಚುಮಗೆ ಬೇಕಾದ ಬ್ರಾಂಡಿನಾಉಷಧ ಸಿಗದಿದ್ದರೆ ಅದೆ ಔಷಧವನ್ನು ಬೇರೆ ಬ್ರಾಂಡಿನಲ್ಲಿ ಖರೀದಿಸಬಹುದು. ಆದರೆ ಆ ಬ್ರಾಂಡಿನೊಳಗಿರುವ ಔಷಧ ಮತ್ತು ಅದರ ಪ್ರಮಾಣ ಸರಿ ಇದೆಯೇ, ಇದರಷ್ಟೇ ಇದೆಯೇ ಎಂಬುದನ್ನು ಸರಿಯಾಗಿ ನೋಡಿಕೊಳ್ಳಿ. ಬಾಟಲಿಯ ಮೆಲೆ ಚಿಕ್ಕದಾಗಿ ಬರೆದಿರುವುದನ್ನ ಓದಿ (ಅಥವಾ ಹೆಚ್ಚು ಬಲ್ಲವರಿಂದ ಓದಿಸಿ) ಅದು ನಿಮಗೆ ಬೇಕಾದ ಔಷಧವೇ ಎಂಬುದನ್ನು ಖಚಿತ ಪಡಿಸಿಕೊಳ್ಳಿ.

ಔಶಧಗಳನು ಖರೀದಿಸುವಾಗ ಬೆಲೆಗಳನ್ನು ಹೋಲಿಸಿನೋಡಿ. ಒಳಗಿರುವ ಔಷಧ ಒಂದೆ ಆಗಿದ್ದರೂ ಒಂದೊಂದು ಬ್ರಾಂಡಿನ ಬೆಲೆ ಒಂದೊಂದು ಆಗಿರುತ್ತದೆ. ಜಾಸ್ತಿ ಬೆಲೆಯದ್ದು ಜಾಸ್ತಿ ಪರಿಣಮಕಾರಿ ಎಂದು ನೀವುತಿಳಿದಿದ್ದರೆ ಖಂಡಿತ ಅದು ತಪ್ಪು.
ರಾಧ್ಯವಿದ್ದಲ್ಲೆಲ್ಲ ಮೂಲ ಹೆಸರಲ್ಲಿ ಸಿಗುವ ಔಷಧಗಳನ್ನೇ ಖರಿದಿಸಿ.

ಆಾಸ್ತಿ ಔಷಧವನ್ನು ಜಾಸ್ತಿ ಪ್ರಮಾಣದ ಔಷಧಗಳನ್ನು ಖರೀದಿಸಿದಾಗ ಅದು ಹೆಚು ಹಣವನ್ನು ಉಳಿಸುತ್ತದೆ. ಆದರೆ ಬಳಸುವಾಗ ಪ್ರಮಾಣದ ಬಗೆಗೆ ನಿಮಗೆ ಖಾತ್ರಿ ಇರಬೇಕು.



ಞನೆ ಔಷಧ ಪೆಟ್ಟಿಗೆ

ಚ್ರ್ತಿಮನೆಯಲ್ಲೂ ಈ ಕೆಳಗೆ ಹೇಳಿದ ಔಷಧಗಳು ಪೆಟಿಗೆಯಲ್ಲಿ ಇರಬೇಕು. ಇವುಹಳ್ಳಿಪ್ರದೇಶಗಳಲ್ಲಿನ ಅನೇಕ ಸಮಾನ್ಯ ಸಮಸ್ಯೆಗಳನ್ನು ಎದುರಿಸಲು ಸಾಕು.

ಇವಲ್ಲದೇ ನಿಮ್ಮಲ್ಲಿಯ ಮನೆಮದ್ದುಗಳು ಈ ಪೆಟ್ಟಿಗೆಯೊಳಗೆ ಅಥವಾ ಹಿಟ್ಟಲಲ್ಲಿ ಸೇರಿರಲಿ.

## ಮನೆ ಔಷಧ ಪೆಟ್ಟಿಗೆ

ಪ್ರತಿ ಮನೆಯಲ್ಲೂ ಈ ಕೆಳಗೆ ಹೇಳಿದ ಔಷಧಗಳು ಪೆಟ್ಟಿಗೆಯಲ್ಲಿ ಇರಬೇಕು. ಇವು ಹಳ್ಳಿಪ್ರದೇಶಗಳಲ್ಲಿನ ಅನೇಕ ಸಾಮಾನ್ಯ ಸಮಸ್ಯೆಗಳನ್ನು ಎದುರಿಸಲು ಸಾಕು.

ಇವಲ್ಲದೆ ನಿಮ್ಮಲ್ಲಿಯ ಮನೆಮದ್ದುಗಳು ಈ ಪೆಟ್ಟಿಗೆಯೊಳಗೆ ಸೇರಿರಲಿ.

| ಯಾವುದಕ್ಕೆ, ಏನೇನು | ಎಷ್ಟುಬೇಕು | ವಿವರಕ್ಕಾಗಿ ಪುಟನೋಡಿ |
|---|---|---|
| ಗಾಯ ಮತ್ತು ಚರ್ಮದ ತೊಂದರೆಗಳಿಗಾಗಿ | | |
| ರೋಗಾಣುರಹಿತ ಜಾಳರಿವೆ ಬೇರೆ ಬೇರೆ ಕಾಗದ ಪೊಟ್ಟಣದಲ್ಲಿ | 20 | 110,262 309 |
| 1-2-3 ಇಂಚಗಲದ ಜಾಳರಿವೆಯ ಗಾಲಿಗಳು | ಒಂದೊಂದು 2 | 100 |
| ಸ್ವಚ್ಛ ಹತ್ತಿ | 1 ಸಣ್ಣ ಪೊಟ್ಟಣ | 85,96, 300 |
| ಅಂಟು ಪಟ್ಟಿ 1 ಇಂಚು ಅಗಲದ ಗಾಲಿ | 2 ಗಾಲಿ | 98, 262 |
| ಹೊಸ ಸೋಪು | 1 | 300 |
| 70% ಆಲ್ಕೋಹಾಲ್ ಹಚ್ಚಿ ತಿಕ್ಕಲು | 250ಮಿಲಿ | 85, 300 355 |
| ಕಪ್ಪು ಬಾಟಲಿಯಲ್ಲಿ ಹೆಡ್ರೋಜನ್ ಪೆರಾಕ್ಸೈಡ್ | 1 ಚಿಕ್ಕ ಬಾಟಲಿ | 96,225 254, 255 |
| ವ್ಯಾಸಲೀನ್ | 1 ಬಾಟ್ಲಿ | 104,111 194,242 |
| ಬಿಳಿ ವಿನೇಗರ್ (ಕಾಡಿ) | 500 ಮಿಲಿ | 242,286 338,355 |
| ಸಲ್ಫರ್ | 100ಗ್ರಾಂ | 242,247 246 |
| ಅಯೋಡಿನ್ ಮತ್ತು ಬೆಂಜೋಯಿನ್‌ಗಳ ಟಿಂಕ್ಚರ್ | ಒಂದೊಂದು | ಒಂದು ಸಣ್ಣ ಬಾಟ್ಲಿ 30ಮಿಲಿ |

| ಯಾವುದಕ್ಕಾಗಿ, ಏನೇನು | ಎಷ್ಟುಬೇಕು | ವಿವರಕ್ಕಾಗಿ ಪುಟನೋಡಿ |
|---|---|---|
| ಸಚ್ಛವಾದ, ತುಕ್ಕುಹಿಡಿಯದ ಕತ್ತರಿ | ಎರಡು | 98,300, 308 |
| ಚೂಪು ತುದಿ ಇರುವ ಇಕ್ಕಳಗಳು (ಫೋರ್‌ಸೆಪ್‌ಗಳು) | ಎರಡು | 97,213 |
| ಜ್ವರ ಎಷ್ಟಿದೆ ನೋಡಲಿಕ್ಕಾಗಿ | | |
| ಉಷ್ಣತಾಮಾಪಕ<br>1. ಬಾಲ್ಲಿಡುವುದು<br>2. ಗುದದ್ವಾರದಲ್ಲಿಡುವುದು | ಒಂದೊಂದು | 36,37 |
| ಸಾಮಾನುಗಳನ್ನು ಸ್ವಚ್ಛವಾಗಿಡಲು<br>ಪ್ಲಾಸ್ಟಿಕ್ ಚೀಲ | ಬಹಳಷ್ಟು | 237,378 |
| **ಔಷಧಗಳು** | | |
| ಬ್ಯಾಕ್ಟೀರಿಯಾ ಸೋಂಕಿಗೆ<br>ಪೆನಿಸಿಲಿನ್ 250 ಮಿ.ಗ್ರಾ<br>ಮಾತ್ರೆಗಳು (2,00,000 ) | 40 | 389 |
| 2. ಸಲ್ಫೋನಮೈಡ್<br>500ಮಿ.ಗ್ರಾ. ಮಾತ್ರೆಗಳು | 100 | 394 |
| 3. ಟೆಟ್ರಾಸೈಕ್ಲಿನ್<br>250ಮಿ.ಗ್ರಾ. ಕ್ಯಾಪ್ಸೂಲ್‌ಗಳು | 24 | 391 |
| ಜಂತುಗಳಿಗೆ<br>4. ಮೆಬೆಂಡಝೋಲ್<br>ಮಾತ್ರೆ/ಔಷಧಗಳು | 500 ಮಿ.ಗ್ರಾಂ<br>40 ಮಾತ್ರೆಗಳು/<br>2 ಬಾಟ್ಲಿ | 403 |
| ಜ್ವರ ಮತ್ತು ನೋವಿಗೆ<br>5. ಆ್ಯಸ್ಪಿರಿನ್ 300 ಮಿ.ಗ್ರಾ.<br>ಮಾತ್ರೆಗಳು ಅಥವಾ<br>ಪ್ಯಾರಾಸಿಟಮಾಲ್ (500 ಮಿ.ಗ್ರಾ) | 50 | 406 |
| ನೀರ್ಗಳಿತಕ್ಕೆ<br>6. ಸೋಡಿಯಂ ಬೈಕಾರ್ಬೊನೇಟ<br>(ಸಕ್ಕರೆ ಮತ್ತು ಉಪ್ಪು) | 1/2 ಕೆ.ಜಿ. | 182 |
| ಜೀವನ ಜಲ<br>ಮಿಶ್ರಿತದ ಪಾಕೀಟು | 10 ಪಾಕೀಟು | 408 |

| ಯಾವುದಕ್ಕೆ, ಏನೇನು | ಎಷ್ಟೆಷ್ಟು | ವಿವರಕ್ಕಾಗಿ ಪುಟನೋಡಿ. |
|---|---|---|
| **ಅನಿಮಿಯಾ (ರಕ್ತಹೀನತೆ)** | | |
| 7. ಕಬ್ಬಿಣದ ಮಾತ್ರೆಗಳು<br>200ಮಿ.ಗ್ರಾ. (ಫೆರಸ್ ಸಲ್ಫೇಟ)<br>ಜೊತೆಗೆ ಫೋಲಿಕ್<br>ಆ್ಯಸಿಡ್ ಕೂಡ ಇದ್ದರೆ ಒಳ್ಳೆಯದು | 100 | 415 |

ಕ್ಯಾಪ್ಸೂಲ್‌ಗಳು ತುಂಬ ದುಬಾರಿಯಾಗಿದ್ದು ಮಾತ್ರೆಗಳಿಗಿಂತ ಹೆಚ್ಚಿನದೇನೂ ಅಲ್ಲ. ಅವನ್ನು ಖರೀದಿಸಬೇಡಿ.

| | | |
|---|---|---|
| **ಹುರುಕು ಕಜ್ಜಿ ಮತ್ತು ಹೇನು** | | |
| 8 ಲಿಂಡೇನ್<br>(ಗಾಮಾಬೆಂಜೀನ್ ಹೆಕ್ಸಾ<br>ಕ್ಲೋರೈಡ್) | 1 ಬಾಟ್ಲಿ | 403 |
| **ತುರಿಕೆ ಮತ್ತು ವಾಂತಿಗೆ** | | |
| 9 ಪ್ರೋಮೆಥಾಝೀನ್<br>25 ಮಿ.ಗ್ರಾ. ಮಾತ್ರೆಗಳು | 12 | 410 |
| **ಸಾಮಾನ್ಯ ಚರ್ಮರೋಗಗಳು** | | |
| 10. ಜೆಂಶೀನ್ ವ್ಯೆಯೊಲೆಟ್<br>5% ದ್ರಾವಣ ಸಣ್ಣ ಬಾಟಲಿ<br>ಅಥವಾ ಜೀವಿರೋಧಕ ಮುಲಮು | 1ಬಾಟ್ಲಿ<br>1ಟ್ಯೂಬ್ | 401 |
| **ಕಣ್ಣಿನ ಸೋಂಕು** | | |
| 11. ಜೀವಿರೋಧಕ ಕಣ್ಣಿನ<br>ಮುಲಮು (ಟೆಟ್ರಾಸೈಕ್ಲಿನ್) | 1 ಟ್ಯೂಬ್ | 404 |
| **ಕಿವಿಗೆ ಸೋಂಕು** | | |
| 13. ಬೋರೋಗ್ಲಿಸರೀನ್ ಕಿವಿ<br>ಔಷಧ | 1 ಬಾಟ್ಲಿ | 405 |
| 14. ಕ್ಲೋರಂಫೆನಿಕಾಲ್ ಇರುವ<br>ಕಿವಿ ಔಷಧ | 1 ಬಾಟ್ಲಿ | |
| **ಮೂಗು ಕಟ್ಟಿದ್ದಕ್ಕೆ.** | | |
| ಸಡಿಲ ಮಾಡುವ ನೇಸಲ್‌ಡ್ರಾಪ್ಸ್ | 1 ಬಾಟ್ಲಿ | 408 |

# ಹಳ್ಳಿಯ ಔಷಧ ಪೆಟ್ಟಿಗೆ

ಮನೆ ಔಷಧ ಪೆಟ್ಟಿಗೆಯಲ್ಲಿ ಕೊಟ್ಟಿರುವ ಎಲ್ಲಾ ಔಷಧಗಳೂ ಈ ಡಬ್ಬಿಯಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಇರಬೇಕು. ಊರು ಎಷ್ಟು ದೊಡ್ಡದು, ಔಷಧಂಗಡಿ ಎಷ್ಟು ದೂರದಲ್ಲಿದೆ ಎಂಬುದನ್ನವಲಂಬಿಸಿ ಔಷಧ ಎಷ್ಟುಬೇಕೆಂದು ನಿರ್ಧರಿಸಬಹುದು. ಇದರಲ್ಲಿ ಮೇಲೆ ಹೇಳಿದ ಔಷಧಗಳಲ್ಲದೇ ದೊಡ್ಡ ದೊಡ್ಡ ರೋಗಕ್ಕೆ ಬೇಕಾದ ಔಷಧಗಳೂ ಇರಬೇಕು. ನಿಮ್ಮ ಹಳ್ಳಿಗೆ ಬೇಕಾದಂತೆ ಈ ಪಟ್ಟಿನ್ನು ನೀವು ಹೆಚ್ಚು ಕಡಿಮೆ ಮಾಡಬಹುದು.

## ಹೆಚ್ಚಿನ ಸಾಮಗ್ರಿಗಳು

| ಯಾವುದಕ್ಕಾಗಿ, ಏನೇನು | ಎಷ್ಟುಬೇಕು | ವಿವರಕ್ಕಾಗಿ ಪುಟನೋಡಿ |
|---|---|---|
| ಇಂಜೆಕ್ಷನ್ ಸಿರಿಂಜ್‌ಗಳು | | 77 |
| 2 ಮಿ.ಲಿ. | 2 | |
| 5 ಮಿ.ಲಿ. | 2 | |
| 10 ಮಿ.ಲಿ. | 1 | |
| ಮೂತ್ರ ಮಾಡಲು ತೊಂದರೆ ಪ್ಲಾಸ್ಟಿಕ್/ರಬ್ಬರ್ ನಳಿಕೆ (ಕ್ಯಾಥೆಟರ್) | 2 | 284 |
| ಉಳುಕು ಮತ್ತು ಬಾತುಕೊಂಡ ರಕ್ತನಾಳಗಳು | | |
| ಇಲಾಸ್ಟಿಕ್ ಬ್ಯಾಂಡೇಜ್‌ಗಳು | 3-6 | 115,213 |
| 2 ಮತ್ತು 3'' ಅಗಲ | | 255 |
| ಸಿಂಬಳವನ್ನು ಹೊರಗೆ ತೆಗೆಯಲು | | |
| ಹೀರು ಪುಗ್ಗ (ಸಕ್ಷನ್‌ಬಲ್ಬ್) | 1-2 | 97,301 355 |
| ಕಿವಿಯೊಳಗೆ ನೋಡಲು ಸಣ್ಣ ಬ್ಯಾಟರಿ | 1 | 42, 301, 355 |

## ಹೆಚ್ಚಿನ ಔಷಧಗಳು

| | | |
|---|---|---|
| ತೀವ್ರ ಸೋಂಕುಗಳಿಗಾಗಿ | | |
| 1. ಪೆನಿಸಿಲಿನ್ | 20-40 | 390 |
| 2. ಟೆಟ್ರಾಸೈಕ್ಲಿನ್ ಕ್ಯಾಪ್ಸೂಲ್‌ಗಳು ಅಥವಾ 250ಮಿ.ಗ್ರಾ. ಮಾತ್ರೆಗಳು | 40-80 | 392 |
| ಅಮೀಬಾ ಮತ್ತು ಗಿಯಾರ್ಡಿಯಾ ಸೋಂಕು. | 40-80 | 399 |
| 3. ಮೆಟ್ರನಿಡಜೋಲ್ 200ಮಿ.ಗ್ರಾ. ಮಾತ್ರೆಗಳು | | |

| ಯಾವುದಕ್ಕಾಗಿ, ಏನೇನು | ಎಷ್ಟೆಷ್ಟು | ವಿವರಕ್ಕಾಗಿ ಪುಟನೋಡಿ |
|---|---|---|
| ಮೂರ್ಛೆ, ಧನುರ್ವಾಯು, ತೀವ್ರ ನಾಯಿಕೆಮ್ಮು | | |
| 4. ಫಿನೋಬಾರ್ಬಿಟಾಲ್ ಮಾತ್ರೆಗಳು | 40-80 | |
| 200 ಮಿ.ಗ್ರಾ. ಇಂಜೆಕ್ಷನ್ | 15-30 | 413 |
| 5. ಪ್ಯಾರಾಲ್ಡೆಹೈಡ್ 2 ಮಿ.ಲಿ. ಮತ್ತು | | |
| 5 ಮಿ.ಲಿ. ಆ್ಯಂಪ್ಯೂಲ್‌ಗಳು | 10-20 | 414 |
| ತೀವ್ರ ಅಲರ್ಜಿ ಮತ್ತು ಆಸ್ತಮಾ | | |
| 6. ಅಡ್ರೆನಾಲಿನ್ ಇಂಜೆಕ್ಷನ್‌ಗಳು | | |
| 1 ಮಿ.ಗ್ರಾಂ. ಆ್ಯಂಪ್ಯೂಲ್‌ಗಳು | 5-10 | 410 |
| ಆಸ್ತಮಾ | | |
| 7. ಎಫೆಡ್ರೀನ್ 15 ಮಿ.ಗ್ರಾ. | 20-100 | 409 |
| ತೀವ್ರ ರಕ್ತಸ್ರಾವ, ಬಾಣಂತನದ ನಂತರ | | |
| 8. ಮಿಥೈಲ್ ಎರ್ಗೋಟಮೈನ್ | | |
| ಮೇಲಿಯೇಟ್ ಇಂಜೆಕ್ಷನ್ 0.2 ಮಿ.ಗ್ರಾ/ಮಿ.ಲಿ | 6-12 | 414 |

## ಎಲ್ಲಾ ಕಡೆಗೂ ಬೇಕಾಗಿಲ್ಲದ ಆದರೆ ಕೆಲವು ಕಡೆ ಬೇಕಾದ ಔಷಧಗಳು

| | | |
|---|---|---|
| ಒಣಕಣ್ಣಿನ (ಕ್ಸಿರೋಸಿಸ್) ತ್ರಾಸು ಇರುವಲ್ಲಿ | | |
| ವಿಟಮಿನ್ ಎ 50,000 ಐ.ಯು | 10-100 | *415 |
| ಧನುರ್ವಾಯು ಬಹಳ ಇರುವಲ್ಲಿ | | |
| ಇಂಜೆಕ್ಷನ್ ಟಿಟಾನಸ್ ಆಂಟಿಟಾಕ್ಸಿನ್ | | |
| ಇಂಜೆಕ್ಷನ್ 50,000 ಯುನಿಟ್ | 2-4 ಆ್ಯಂಪ್ಯೂಲ್ | 412 |
| ಧನುರ್ವಾಯು ಬಹಳ ಇರುವಲ್ಲಿ | 2-4 | 4-413 |
| ಇಂಜೆಕ್ಷನ್ ಟಿಟಾನಸ್ ಆಂಟಿಟಾಕ್ಸಿನ್ | ಬಾಟಲಿ | |
| ಟೈಫಾಯಿಡ್ ಇರುವಲ್ಲಿ | | |
| ಕ್ಲೋರಾಂಫೆನಿಕಾಲ್ 25 ಮಿ.ಗ್ರಾ. ಕ್ಯಾಪ್ಸ್ಯೂಲ್ | 50-200 | 393 |
| ಹಾವು ಕಚ್ಚುವ ಭಯವಿದ್ದರೆ | | |
| ಪೊಲಿವ್ಯಾಲೆಟ್ ಎಂಟಿವೆನಿನ್ | 2-6 | 412 |
| ಮಲೇರಿಯಾ ಬಹಳ ಇರುವಲ್ಲಿ | | |
| ಕ್ಲೋರೋಕ್ವೀನ್ | | |
| 150 ಮಿ.ಗ್ರಾ. ಬೇಸ್‌ನ ಮಾತ್ರೆಗಳು | 50-200 | 397 |

| ಯಾವುದಕ್ಕಾಗಿ, ಏನೇನು | ಎಷ್ಟೆಷ್ಟು | ವಿವರಕ್ಕಾಗಿ ಪುಟನೋಡಿ |
|---|---|---|
| ಪ್ರಿಮಕ್ವೀನ್ ಮಾತ್ರೆಗಳು<br>26 ಮಿ.ಗ್ರಾ. ಬೇಸ್‌ನೊಟ್ಟಿಗೆ | 100-200 | 397 |
| ಆನೆಕಾಲು ರೋಗ ಬಹಳ ಇರುವಲ್ಲಿ<br>ಹೆಟ್ರಝಾನ್ 50 ಮಿ.ಗ್ರಾ. ಮಾತ್ರೆಗಳು | 30-50 | 404 |
| ಕೊಕ್ಕೆಹುಳುಗಳ ಬಾಧೆ ಇರುವಲ್ಲಿ<br>ಥಿಯಾಬೆಂಡಾಝೋಲ್ 500 ಮಿ.ಗ್ರಾ. ಮಾತ್ರೆಗಳು<br>ಅಥವಾ ಇನ್ನಾವುದೇ ಕೊಕ್ಕೆ ಹುಳದ ಔಷಧ. | 25-100 | 403 |
| ಕಡಿಮೆ ತೂಕದ ನವಜಾತ ಶಿಶುಗಳಲ್ಲಿ<br>ರಕ್ತಸ್ರಾವ ತಡೆ ಮತ್ತು ಚಿಕಿತ್ಸೆಗೆ<br>ವಿಟಮಿನ್ ಕೆ 1 ಮಿ.ಗ್ರಾ. ಇಂಜೆಕ್ಷನ್‌ಗಳು | 3-6 | 416 |

## ಸದಾ ಇರುವ ಕಾಯಿಲೆಗಳ ಔಷಧಗಳು:

ಕ್ಷಯ, ಕುಷ್ಟದಂಥ ಬಹುಕಾಲ ಇರುವ ಕಾಯಿಲೆಗಳಿಗೆ ಔಷಧಗಳನ್ನು ಇಟ್ಟಿರುವದು ಬೇಕೇ ಬೇಡವೇ ಯೋಚಿಸಿ. ಈ ರೋಗ ಇದೆಯೆ ಇಲ್ಲವೇ ಖಚಿತಪಡಿಸಿಕೊಳ್ಳಲು ಮುಖ್ಯ ಪರೀಕ್ಷೆಗಳು ಆಗಬೇಕು. ಪರೀಕ್ಷೆ ಆಗುವ ಆರೋಗ್ಯ ಕೇಂದ್ರಗಳಿಂದಲೇ ಔಷಧವನ್ನೂ ಪಡೆಯಬಹುದು. ನಂತರ ಔಷಧ ಸಿಗುವುದು ಎಷ್ಟು ದೂರ, ಬೇಕಾದವನಿಗೆ ಔಷಧ ತಂದುಕೊಳ್ಳಲಿಕ್ಕೆ ಆಗುತ್ತದೆಯೇ ನೋಡಿ ಅವನ್ನು ತಂದಿಡಬೇಕು.

## ಲಸಿಕೆಗಳು

ಇವುಗಳನ್ನು ಆರೋಗ್ಯ ಇಲಾಖೆಯವರೇ ಕೊಡುವುದರಿಂದ ಹಳ್ಳಿಔಷಧ ಡಬ್ಬಿಯಲ್ಲಿ ಇವುಗಳ ಹೆಸರಿಲ್ಲ. ಆದರೆ, ಈ ಕುರಿತು ಗಮನ ಕೊಡುತ್ತಿದ್ದು ಹಳ್ಳಿಯಲ್ಲಿ ಯಾರು ಚುಚ್ಚುಮದ್ದು ಪಡೆಯಬೇಕು, ಎಲ್ಲಾ ಮಕ್ಕಳಿಗೂ ಸಿಗುತ್ತಿದೆಯೇ ಎಂಬ ಕುರಿತು ಕಾಳಜಿ ವಹಿಸಬೇಕು (175ನೇ ಪುಟ). ಲಸಿಕೆಗಳನ್ನಿಡಲು ತಂಪು ಪೆಟ್ಟಿಗೆ (ಫ್ರಿಜ್) ಇದ್ದರೆ ಅವುಗಳನ್ನೂ - ಮುಖ್ಯವಾಗಿ ಡಿಪಿಟಿ, ಪೋಲಿಯೋ, ಟಿಟಿ ಲಸಿಕೆಗಳನ್ನು - ತಂದಿಟ್ಟಿರಿ.

## ಹಳ್ಳಿಯ ಔಷಧ ಅಂಗಡಿಯವನಿಗೊಂದು ಓಲೆ



ಪ್ರಿಯ ಮಿತ್ರ,

ಔಷಧಗಳನ್ನು ನಿಮ್ಮ ಅಂಗಡಿಯಲ್ಲಿ ಇಟ್ಟಿದ್ದರೆ, ಜನರು ಹೆಚ್ಚಾಗಿ ಯಾವ ಔಷಧ ತೆಗೆದುಕೊಳ್ಳುವುದು, ಎಷ್ಟು ತೆಗೆದುಕೊಳ್ಳುವುದು. ಎಂದೆಲ್ಲ ನಿಮ್ಮನ್ನೇ ಕೇಳುತ್ತಾರೆ. ಜನರ ಆರೋಗ್ಯ ಮತ್ತು ತಿಳುವಳಿಕೆಯ ಮೇಲೆ ನಿಮ್ಮ ಪ್ರಭಾವ ಜಾಸ್ತಿ ಆಗುತ್ತದೆ.

ಜನ ಕೇಳಿದಾಗ ಅವರಿಗೆ ಸರಿಯಾದ ಔಷಧ ಕೊಳ್ಳುವಂತೆ ಹೇಳಲು ನಿಮಗೆ ಈ ಪುಸ್ತಕವು ಸಹಾಯಮಾಡುತ್ತದೆ.

ಜನರು ಎಷ್ಟೋಬಾರಿ ತಮ್ಮಲ್ಲಿರುವ ಅಲ್ಪ ಹಣವನ್ನೇ, ತಮಗೆ ನಿಜವಾಗಿ ಅವಶ್ಯವಿಲ್ಲದ ಔಷಧಗಳಿಗಾಗಿ ಖರ್ಚುಮಾಡುವರೆಂಬುದು ನಿಮಗೂ ಗೊತ್ತೇ ಇದೆ. ಅಂಥ ಸಂದರ್ಭಗಳಲ್ಲಿ ಅವರಿಗೆ ನಿಜವಾಗಿ ಬೇಕಾಗಿದ್ದೇನೆಂದು ತಿಳಿಸಿ ಅಂಥ ಔಷಧಗಳನ್ನು ಮಾತ್ರ ಕೊಳ್ಳಲು ನೀವು ಹೇಳಬೇಕು. ಉದಾಹರಣೆಗೆ,

★ ಜನರು ಕೆಮ್ಮಿನ ರಸಗಳನ್ನು, ಕೋಲಿನ್‌ನಂಥ ಮಲವನ್ನು ಗಟ್ಟಿಮಾಡುವ ಔಷಧ, ಸಾಮಾನ್ಯ ರಕ್ತಹೀನತೆಗೆ ಯುಕೃತ್ತಿನ ರಸ ಅಥವಾ ವಿಟಮಿನ್ ಬಿ12, ಕಾಲು ಉಳುಕಿದ್ದಕ್ಕೆ ಪೆನಿಸಿಲಿನ್, ನೆಗಡಿಗೆ ಟೆಟ್ರಾಸೈಕ್ಲಿನ್, ಹೀಗೆ ಕೇಳುತ್ತ ಬಂದಾಗ ಇಂಥ ಔಷಧಗಳೆಲ್ಲ ಆಯಾ ರೋಗಕ್ಕೆ ಮದ್ದಲ್ಲ, ಅವುಗಳಿಂದ ಹಾನಿಯೇ ಹೆಚ್ಚು ಎಂಬುದನ್ನು ಅವರೊಂದಿಗೆ ಹೇಳಿ. ಬೇರೆ ಏನು ಮಾಡಬೇಕೆಂಬುದನ್ನು ಅವರ ಜೊತೆಗೇ ಚರ್ಚಿಸಿ.

★ ವಿಟಮಿನ್ ಟಾನಿಕ್ ಕೇಳುತ್ತಿದ್ದರೆ ತರಕಾರಿ, ತತ್ತಿ, ಹಣ್ಣುಗಳನ್ನು ಖರೀದಿಸಲು ಪ್ರೋತ್ಸಾಹಿಸಿ. ಅವುಗಳಲ್ಲೇ ಟಾನಿಕ್‌ಗಿಂತ ಹೆಚ್ಚು ವಿಟಮಿನ್‌ಗಳಿವೆ ಎಂಬುದನ್ನು ತಿಳಿಸಿ ಹೇಳಿ.

★ ಮಾತ್ರೆಗಳು ಸಿಗುತ್ತಿರುವಾಗ, ಇಂಜೆಕ್ಷನ್‌ನ ಅವಶ್ಯಕತೆ ಇಲ್ಲದಾಗ ಇಂಜೆಕ್ಷನ್ ಕೇಳಿದರೆ ಮಾತ್ರೆಗಳೂ, ಇಂಜೆಕ್ಷನ್‌ಗಳೂ ಬೇರೆ ಬೇರೆ ಅಲ್ಲ, ಇಂಜೆಕ್ಷನ್‌ಗಳು ದುಬಾರಿ ಮಾತ್ರ ಎಂದು ಹೇಳಿ.

ಈ ಪುಸ್ತಕ ತೆಗೆದು ನೋಡಿ ಗ್ರಾಹಕರ ಎದುರಲ್ಲೇ ಅವರ ಜೊತೆಗೆ ಓದಿ ಹೇಳಿದರಂತೂ ನಿಮ್ಮ ಕೆಲಸ ಇನ್ನೂ ಸುಲಭವಾಗುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ ಅತಿಅವಶ್ಯವಿರುವ ಔಷಧಗಳನ್ನಷ್ಟೇ ಮಾರಾಟಮಾಡಿ. ಮನೆ ಔಷಧ ಪೆಟ್ಟಿಗೆ, ಹಳ್ಳಿ ಔಷಧ ಡಬ್ಬಿಗಳಲ್ಲಿ ಹೇಳಿರುವ ಔಷಧಗಳೇ ಹೆಚ್ಚಿನ ಪ್ರಮಾಣದಲ್ಲಿ ನಿಮ್ಮ ಬಳಿ ಇರಲಿ. ಜೊತಗೆ ನಿಮ್ಮ ಹಳ್ಳಿಯಲ್ಲಿ ಹೆಚ್ಚಾಗಿ ಕಂಡು ಬರುವ ಕಾಯಿಲೆಗಳ ಔಷಧಗಳನ್ನೂ ಸೇರಿಸಿ. ಕಡಿಮೆ ಬೆಲೆಯ ಬ್ರಾಂಡುಗಳನ್ನೇ ಅಥವಾ ಜೆನೆರಿಕ್ ಹೆಸರಿನ ಔಷಧಗಳನ್ನೇ ಹೆಚ್ಚಾಗಿ ಇಟ್ಟಿರಿ. ಹಾಳಾದ, ತಾರೀಖು ಮುಗಿದುಹೋದ, ಉಪಯೋಗವಿಲ್ಲದ ಔಷಧಗಳನ್ನೆಂದೂ ಮಾರಬೇಡಿ.

ನಿಮ್ಮ ಔಷಧಂಗಡಿಯು ಜನರಿಗೆ ತಮ್ಮ ಆರೋಗ್ಯದ ಬಗ್ಗೆ ತಿಳಿದುಕೊಳ್ಳುವ ಒಂದು ಪಾಠಶಾಲೆಯಾಗಲಿ. ನಿಮ್ಮ ಬಳಿ ಬಂದ ಗ್ರಾಹಕರಿಗೆ ಔಷಧಗಳನ್ನು ಬುದ್ಧಿವಂತಿಕೆಯಿಂದ, ಉಪಯೋಗಿಸುವುದನ್ನು ಹೇಳಿಕೊಟ್ಟರೆ, ನಿಮ್ಮ ಅಂಗಡಿಯಲ್ಲಿ ಔಷಧ ಖರೀದಿಸಿದವರಿಗೆ ಆಯಾ ಔಷಧ ಉಪಯೋಗಿಸುವ ಪ್ರಮಾಣ, ಅದರಿಂದಾಗಬಹುದಾದ ಅಪಾಯಗಳು, ವಹಿಸಬೇಕಾದ ಮುನ್ನೆಚ್ಚರಿಕೆ ಇವೆಲ್ಲವೂ ನಿಮ್ಮಿಂದ ಗೊತ್ತಾಗುತ್ತಿದೆಯೆಂದರೆ ನೀವು ನಾಡಿಗೆ ಬಲುದೊಡ್ಡ ಸೇವೆಯನ್ನು ಮಾಡುತ್ತಿದ್ದೀರಿ.

ಶುಭವಾಗಲಿ.

ನಿಮ್ಮವ,

David Werner

(ಡೇವಿಡ್ ವರ್ನರ್)

## ಳಳ್ಳಿಯ ಔಷಧ ಪೆಟ್ಟಿಗೆ

ಽನೆ ಔಷಧ ಪೆಟ್ಟಿಗೆಯಲ್ಲಿ ಕೊಟಿರುವ ಎಲ್ಲಾ ಔಷದಗಳೂ ಈ ಡಬ್ಬಿಯಲ್ಲಿ ಇನ್ನೂಹೆಚ್ಚಿನ ಪ್ರಮಾಣದಲ್ಲಿ ಇರಬೇಕು. ಊರು ಎಷ್ಟು ದೊಡ್ಡದು, ಔಷಧಂಗಡಿ ಎಷ್ಟು ದೂರದಲ್ಲಿದೆ ಎಂಬುದನ್ನವಲಂಬಿಸಿ ಔಷಧ ಬೇಕೆಂದು ನಿರ್ಧರಿಸಬಹುದು. ಇದರಲ್ಲಿ ಮೇಲೆ ಹೇಳಿದ ಔಷಧಗಳಲ್ಲದೆ ದೊಡ್ಡ ದೊಡ್ಡ ರೋಗಕ್ಕೆ ಬೇಕಾದ ಔಷಧಗಳೂ ಇರಬೇಕು. ನಿಮ್ಮ ಹಳ್ಳಿಗೆ ಬೇಕಾದಂತೆ ಈ ಪಟ್ಟಿಯನ್ನು ನೀವು ಹೆಚ್ಚುಕಡಿಮೆ ಮಾಡಬಹುದು. ಒಂದೊಂದು ಓಣಿಯವರೂ, ಒಂದೊಂದು ಮಹಿಳಾ ಸಂಘದವ್ೂ ಬೇರೆ ಬೇರೆ ಔಷಧ ಪೆಟಿಗೆಯನ್ನೂ ಇಡಬಹುದು.

## ರದಾ ಇರುವ ಕಾಯಿಲೆಗಳ ಔಶದಗಳು

ಕ್ಷಯ, ಕುಷ್ಠದಂಥ ಬಹುಕಾಲ ಇರುವಂಥ ಕಾಯಿಲೆಗಳಿಗೆ ಔಶಃಧಗಳನ್ನು ಇಟ್ಟಿರುವುದು ಬೇಕೆ ಬೇಡವೇ ಎಂದು ಯೋಚಿಸಿ. ಈ ರೋಗ ಇದೆಯೇ ಇಲ್ಲವೇ ಖಚಿತಪಡಿಸಿಕೊಳ್ಳಲು ಮುಖ್ಯ ಪರೀಕ್ಷೆಗಳು ಆಗಬೇಕು. ಪರೀಕ್ಷೆ ಆಗುವ ಆರೋಗ್ಯ ಕೆಂದ್ರಗಳಿಂದಲೇ ಔಷಧಗಳನ್ನೂ ಪಡೆಯಬಹುದು. ಆ ನಂತರ ಔಷಧವನ್ನು ಮತ್ತೆ ತರುವುದು ಎಷ್ಟು ದೂರ, ರೋಗಿಯ ಮನೆಯವರಿಗೆ ಹೋಗಿತರಲು ಆಗುತ್ತದೆಯೇ, ನೋಡಿ ಅವನ್ನು ತಂದಿಡಬೇಕು. ಈ ಔಷಧಗಳನ್ನು ಬಹುಕಾ ಸೇವಿಸಬೇಕಾದ ಅವಶ್ಯಕತೆ ಇರುವುದರಿಂದ, ಕೆಲಕಾಲದಲ್ಲಿ ತಾನು ಆರಾಮವಾದೆ ಎಂದು ತಿಳಿದುಕೊಂಡು ರೋಗಿಯು ಔಷಧವನ್ನು ನಿಲ್ಲಿಸಿಬಿಡುವ ಸಂಭವ ಇರುವುದರಿಂದ ರೋಗಿಯನ್ನೂ, ರೋಗಿಯ ಮನೆಯವರನ್ನೂ ಸ್ವಲ್ಪ ಆಗಾಗ್ಗೆ ವಿಚಾರಿಸಿಕೊಳ್ಳುತ್ತಿದ್ದು ಔಷಧ ಇದೆಯೇ ಮುಗಿದಿದೆಯೇ ಎಂದು ನೆನಪಿಸುತ್ತಿರುವುದೂ ಅತಿ ಮುಖ್ಯ. ಫ್ಹಿಡೀರನೆ ಕಾಣಿಸಿಕೊಳ್ಳುವ ಕಾಲರಾ, ದಂಥ ರೋಗಗಳಿಗೆ ಮೊದಲೆ ಔಷಧ ತರಿಸಿಟ್ಟಿರುವುದೂ ಕೂಡ ಯೋಗ್ಯವೇ ಎಂದೂ ಕೂಡ ನೀವೇ ವಿಚಾರಿಸಿ. ಒಟ್ಟಾರೆ, ನಿಮ್ಮೂರಿಗೆ ಆರೋಗ್ಯ ಕೆಂದ್ರ ಎಷ್ಟು ದೂರದಲ್ಲಿದೆ, ಅಲ್ಲಿ ಹಳ್ಳಿಗರಿಗೆ ಎಷ್ಟು ಸರಿಯಾದ, ಬೇಗ ಚಿಕಿತ್ಸೆ ಸಿಗುತ್ತದೆ ಎನ್ನುವುದರ ಮೇಲೆ ಔಷಧಃ ಪೆಟ್ಟಿಗೆ ತುಂಬಿಕೊಳ್ಳಲಿ. ಸುಲಭವಾಗಿ ಸಿಗುವಂತಿದ್ದರೆ ಅತಿ ಅವಶ್ಯ ಔಷಧಗಳನ್ನು ಮಾ್ರವೇ ತಂದಿಟ್ಟಿರಿ.

ಲಸಿಕೆ–ಚುಚ್ಚುಮದ್ದುಗಳು

ಇವುಗಳನ್ನು ಆರೋಗ್ಯ ಇಲಾಖೆಯವರು ಕೊಡುವುದರಿಂದ ಹಳ್ಳಿಯ ಔಶಃಧ ಡಬ್ಬಿಯಲ್ಲಿ ಇವುಗಳ ಹೆಸ್ರರಿಲ್ಲ. ಆದರೆ ಈ ಕುರಿತು ಗಮನ ಕೊಡುತ್ತಿದ್ದು ಹಳ್ಳಿಯಲ್ಲಿ ಯಾರು ಚುಚ್ಚುಮದ್ದು ಪಡೆಯಬೇಕು, ಎಲ್ಲಾ ಮಕ್ಕಳಿಗೂ ಸರಿಯಾಗಿ ಸಿಗುತ್ತಿದೆಯೇ ಎಂಬಕುರಿತು ಕಾಳಜಿ ವಹಿಸಬೇಕು.(೧೭೫ ನೇ ಪುಟ) ಲಸಿಕೆಗಳನ್ನುಡಲು ತಂಪು ಪೆಟಿಗೆಇದ್ದರೆ ಅವುಗಳನ್ನೂ, ಮುಖ್ಯವಾಗಿ ಡಿಪಿಟಿ, ಪೊಲಿಯೋ, ಟಿಟಿ ಲಸಿಕೆಗಳನ್ನು ತಂದಿಟ್ಟಿರಿ



## ಳಳ್ಳಿಯ ಔಷಧ ಅಂಗಡಿಯವನಿಗೊಂದು ಓಲೆ.

ಪ್ರಿಯ ಮಿತ್ರ,

ಚಿಮ್ಮ ಅಂಗಡಿಯಲ್ಲಿ ಷಧಗಳನ್ನು ಇಟ್ಟಿದ್ದರೆ,

ಜನರು ಯಾವ ಔಷಧವನ್ನು ಎಷ್ಟು ತೆಗೆದುಕೊಳ್ಳುವುದು, ಯಾವಾಗ ತೆಗೆದುಕೊಳ್ಳುವುದು ಎಂದೆಲ್ಲ ನಿಮ್ಮನ್ನೆ ಕೇಳುತ್ತಾರೆ. ಜನರ ಆರೋಗ್ಯ ಮತ್ತು ತಿಳುವಲಿಕೆಯ ಮೇಲೆ ನಿಮ್ಮ ಪ್ರಭಾವ ಜಾಸ್ತಿ ಆಗುತ್ತದೆ.

ಇನ ಕೆಳಿದಾಗ ಅವರಿಗೆ ಸರಿಯಾದ ಔಷಧ ತೆಗೆದುಕೊಳ್ಳುವಂತೆ ಹೇಳಲು ನಿಮಗೆ ಈ ಪುಸ್ತಕವು ಸಹಾಯ ಮಾಡುತ್ತದೆ.

ಇನರು ಎಷ್ಟೋ ಬಾರಿ ತಮ್ಮಲ್ಲಿರುವ ಅಲ್ಪ ಹಣವನ್ನೇ ತಮಗೆ ಅವಶ್ಯವಿಲ್ಲದ ಔಷಧಗಳಿಗಾಗಿ ಖರ್ಚು ಮಾಡುವರೆಂಬುದು ನಿಮಗೂ ಗೊತ್ತಿದೆ. ಇಂಥ ಸಂಧರಬಗಳಲ್ಲಿ ಅವರಿಗೆನಿಜವಾಗಿ ಬೇಕಾದ್ದೇನೆಂದು ತಿಳಿಸಿ ಅಂಥ ಔಷಧಗಳನ್ನು ಮಾತ್ರ ಕೊಳ್ಳಲು ನೀವುಹೇಳಬೇಕು.  ಉದಾಹರಣೆಗೆ,

- ಜನರು ಕೆಮ್ಮಿನ ರಸಗಳನ್ನು ಕೋಲಿನ್ ನಂಥಲವನ್ನು ಗಟ್ಟಿಮಾಡುವ ಾಉಷಧಗಳನ್ನು, ಸಾಮಾನ್ಯ ರಕ್ತ ಹೀನತೆಗೆ ಯಕೃತ್ತಿನ ರಸ ಅಥವಾ ವಿಟಮಿನ್ ಬಿ೧೨ ಕಾಲುಉಳುಕಿದ್ದಕ್ಕೆ ಪೆನಿಸಿಲಿನ್, ನೆಗಡಿಗೆಟೆಟ್ರಾಸೈಕ್ಲಿನ್, ಹೀಗೆ ಕೇಳುಟ್ಟ ಬಂದಾಗ ಅಂಥ ಔಷಢಗಳೆಲ್ಲ ಆಯಾ ರೋಗಕ್ಕೆ ಮದ್ದಲ್ಲ, ಅವುಗಳಿಂದ ಹಾನಿಯೇ ಹೆಚ್ಚು ಎಂಬುದನ್ನು ಅವರೊಂದಿಗೆ ಹೇಳಿ. ಬೇರೆ ಏನು ಮಾಡಬೇಕೆಂದು ಅವರೊಂದಿಗೆ ಚರ್ಚಿಸಿ.

- ್ಟಟಮಿನ್ ಟಾನಿಕ್ ಕೇಳುತ್ತ್ಟಿದ್ದರೆ ತರಕಾರಿ, ತತ್ತಿ, ಹಣ್ಣುಗಲನು ಖರೀದಿಸಲು ಪ್ರೋತ್ಸಾಹಿಸಿ. ಅವುಗಳಲ್ಲೆ ಟಾನಿಕ್ ಗಿಂತ ಹೆಚ್ಚು ವಿಟಮಿನ್ ಗಳಿವೆ ಎಂಬುದನ್ನು ತಿಳಿಸಿ ಹೇಳಿ.

- ್ಞಾತ್ರೆಗಳು ಸಿಗುತ್ತಿರುವಾಗ, ಇಂಜೆಕ್ಷನ್ ನ ಅವಶ್ಯಕತೆ ಇಲ್ಲದಾಗ ಇಂಜೆಕ್ಷನ್ ಕೇಳಿದರೆ ಮಾತ್ರೆಗಳೂ, ಇಂಜೆಕ್ಷನ್ ಗಳು ಬೇರೆಯಲ್ಲ ಇಂಜೆಕ್ಷನ್ ಗಳು ಬಲು ದುಬಾರಿ ಮಾತ್ರ ಅಎಂದು ತಿಳಿಸಿ ಹೇಳಿ.

ಈ ಪುಸ್ತಕ ತೆಗೆದು ನೋಡಿ ಗ್ರಾಅಹಕರ ಎದುರಲ್ಲೆ ಅವರ ಜೊತೆಗೆ ಓದಿ ಹೇಳಿದರಂತೂ ನಿಮ್ಮಕೆಲಸ ಇನೂ ಸುಲಭವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಅತಿ ಅವಶ್ಯವಿರುವ ಔಸಧಗಳನ್ನಷ್ಟೇ ನೀವುಮಾರಾಟಮಾಡಿ. ಮನೆ ಔಷಧ ಪೆಟ್ಟಿಗೆ,ಹಳ್ಳಿ ಔಷಧ ಪೆಟ್ಟಿಗೆಗಳಲಿ ಹೇಳಿರುವಂಥ ಔಷಧಗ'ನ್ನೆ ಹೆಚ್ಚಿನಪ್ರಮಾದಲ್ಲಿ ನಿಮ್ಮ ಬಳಿ ಇಟ್ಟಿರಿ. ಆೊತೆಗೆ ನಿಮ್ಮ ಹಳ್ಳಿಯಲ್ಲಿ ಹೆಚಾಗಿ ಕಂಡುಬರುವ ಕಾಯಿಲೆಗಳ ಔಷಧಗಳ ಹೆಸರೂ ಸೇರಿಸಿ.  ಕಡಿಮೆ ಬೆಲೆಯ ಬ್ರಾಂಡುಗಳನ್ನೇಅಥವಾ ಜನೆರಿಕ್ ಹೆಸರಿನ ಔಶಧಗಳನ್ನೆ ಹೆಚ್ಚಾಗಿಇಟ್ಟಿರಿ.  ಲಾಳಾದ , ಮುಗಿದುಹೋದ ಉಪಯೋಗವಿಲ್ಲದ ಔಷಢ್ಧಗಳನ್ನಂತೂ ಮಾರಬೇಡಿ.

ಚುಮ್ಮ ಔಷಧಂಗಡಿಯು ಜನರಿಗೆ ತಮ್ಮ ಆರೋಗ್ಯದ ಬಗ್ಗೆ ತಿಳಿದುಕೊಳ್ಳುವ ಒಂದು ಪಾಠಶಾಲೆಯಾಗಲಿ. ನಿಮ್ಮ ಬಳಿ ಬಂದ ಗ್ರಾಹಕರಿಗೆ ಔಷಧಗಳನ್ನು ಬುದ್ದಿವಂತಿಕೆಯಿಂದ ಉಪಯೋಗಿಸುವುದನ್ನು ಹೆಳಿಕೊಟ್ಟರೆ ನಿಮ್ಮ ಅಂಗಡಿಯಲ್ಲಿ ಖರೀದಿಸಿದವರಿಗೆ ಆಯಾ ಔಸಃಢಃ ಉಪಯೋಗಿಸುವ ಪ್ರವಾಣ, ಅದರಿಂದಾಗಬಹುದಾದ ಅಪಾಯಗಳು ವಹಿಸಬೇಕಾದ ಎಚ್ಚರಿಕೆಇವೆಲ್ಲವೂ ನಿಮ್ಮಿಂದ ಗೊತ್ತಾಗುತ್ತಿದೆಯೆಂಡಃರೆ ನೀವು ನಾಡಿಗೆ ಬಲು ದೊಡ್ಡ ಸೇವೆಯನ್ನು ಮಾಡುಃತ್ತಿದ್ದಿರಿ.

್ಸಭವಾಗಲಿ,

ನಿಮ್ಮವ,

David Werner

(ಡೇವಿಡ್ ವರ್ನರ್)